ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು). —

ಅ) ರಾಜ್ಯದಲ್ಲಿ ೬ಲಕ್ಷ ವಿಮಾದಾರರಿಲ್ಲ. ಸುಮಾರು ೪.೦೫ ಲಕ್ಷ ವಿಮಾದಾರರಿದ್ದು ರಾಜ್ಯದ ವಿವಿಧ ಭಾಗಗಳಲ್ಲಿ ೭ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಗಳು, ೧೧೩ ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯಗಳು ೩ ಅನುಬಂಧ ಆಸ್ಪತ್ರೆಗಳು ಮತ್ತು ೧೧ ನಿಯೋಜಕರ ಆಸತ್ರೆಗಳು ಮತ್ತು ಇತರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಒಟ್ಟು ೧೭೬೯ ಹಾಸಿಗೆಗಳ ಪೂರ್ಣ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆಗಳಲ್ಲಿ ದೊರೆಯದ ವಿಶೇಷ ವೈದ್ಯಕೀಯ ಸೌಲಭ್ಯಗಳನ್ನು ರಾಜ್ಯ ದೊಳಗೆ ಮತ್ತು ರಾಜ್ಯದ ಹೊರಗೆ ಸರ್ಕಾರದಿಂದ ಮಾನ್ಯತೆ ಪಡೆದಿರುವ ಆಸ್ಪತ್ರೆಗಳಿಂದ ಒದಗಿಸಲಾಗುತ್ತಿದೆ. ಆದ್ದರಿಂದ ಸೌಲಭ್ಯ ಸಾಕಾಗದಿರುವ ಬಗ್ಗೆ ವರದಿಗಳು ಇಲಾಖೆಯ ಗಮನಕ್ಕೆ ಬಂದಿಲ್ಲ.

ಆ) ಬೆಂಗಳೂರು ನಗರ ಜಿಲ್ಲೆಯಲ್ಲಿ ಸುಮಾರು ೨.೧೫ ಲಕ್ಷ ವಿಮಾದಾರರಿದ್ದು ೨ ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ ೪೩ ಕಾರ್ಮಿಕರ ರಾಜ್ಯ ವಿಮಾ ಚಿಕಿತ್ಸಾಲಯಗಳು, ೫ ನಿಯೋಜಕರ ಆಸ್ಪತ್ರೆಗಳು ಮತ್ತು ಇತರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಒಟ್ಟು ೧೦೭೭ ಹಾಸಿಗೆಗಳ ಸೌಲಭ್ಯವಿದ್ದು ಈ ಬಗ್ಗೆ ಪೂರ್ಣ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ನಗರದಲ್ಲಿ ಒಂದು ರೋಗಿ ಪತ್ತೆ ಹಚ್ಚುವ ಕೇಂದ್ರವನ್ನು ಸಧ್ಯದಲ್ಲಿ ಸ್ಥಾಪಿಸಲಾಗುತ್ತಿದೆ, ವಿಮಾದಾರರ ಅನುಕೂಲಕ್ಕಾಗಿ ನಗರದಲ್ಲಿ ೮ ಚಿಕಿತ್ಸಾಲಯಗಳು ಸತತ ೧೨ ಘಂಟೆಗಳಕಾಲ ಕೆಲಸ ನಿರ್ವಹಿಸುತ್ತಿವೆ, ಆದ್ದರಿಂದ ನಗರ ಜಿಲ್ಲೆಯಲ್ಲಿ ಇ.ಎಸ್. ಐ ಸೌಲಭ್ಯ ಸಾಕಾಗದಿರುವುದು ಇಲಾಖೆಯ ಗಮನಕ್ಕೆ ಬಂದಿಲ್ಲ.

ಇ) ಸರ್ಕಾರದಿಂದ ಈಗಾಗಲೇ ೧೨೦ ವಿಮಾ ವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ತುಂಬಲಾಗಿದ್ದು ವೈದ್ಯರ ಕೊರತೆ ಇಲ್ಲ. ಚಿಕಿತ್ಸಾಲಯಗಳಿಗೆ ಔಷಧಿ ಸರಬರಾಜು ತೃಪ್ತಿಕರವಾಗಿದೆ. ಚಿಕಿತ್ಸಾಲಯ ಹಾಗೂ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ಕಂಡುಬಂದಲ್ಲಿ ಇಲಾಖೆಯಲ್ಲಿ ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸಿ ಕೊರತೆ ನಿವಾರಿಸಲಾಗುತ್ತಿದೆ. ಹಾಗೂ ಚಿಕಿತ್ಸಾಲಯಗಳಿಗೆ ಬಾಡಿಗೆ ಕಟ್ಟಡಗಳು ದೊರೆಯದಿದ್ದಲ್ಲಿ ಖಾಲಿ ನಿವೇಶನಗಳನ್ನು ಪತ್ತೆಹಚ್ಚಿ ಕಾರ್ಮಿಕರ ರಾಜ್ಯ ವಿಮಾ ನಿಗಮದಿಂದ ಚಿಕಿತ್ಸಾಲಯಗಳ ಕಟ್ಟಡದ ಕೊರತೆಗಳನ್ನು ನಿವಾರಿಸಲಾಗುತ್ತಿದೆ.

ಬೆಂಗಳೂರು ನಗರ ಪೋಲಿಸ್ ಬಲವನ್ನು ಬಲಪಡಿಸುವುದು

೮೧೧ (೫೦೩) ಶ್ರೀ ಎ. ಕೃಷ್ಣಪ್ಪ (ವರ್ತೂರು). —ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

೧) ನಗರದ ಜನಸಂಖ್ಯೆ ೬೦ ಲಕ್ಷಕ್ಕೇರಿದ್ದು, ಈಗ ಸುಮಾರು ಐದೂವರೆ ಲಕ್ಷ ವಾಹನಗಳು ಸಂಚರಿಸುತ್ತಿದ್ದು ಕೇವಲ ೫೦೦ ಸಂಚಾರಿ ಪೋಲೀಸ್ ಕೆಲವೇ ಹಿರಿಯ ಅಧಿಕಾರಿಗಳು ಇದನ್ನು ನಿಬಾಯಿಸಲು ಸಾಧ್ಯವೇ?

೨) ಈ ಟ್ರಾಫಿಕ್ ಪೋಲೀಸರ ಸಂಖ್ಯೆ ೧೦೦೦ಕ್ಕೆ ಏರಿಸಲು ಸರ್ಕಾರವು ಉದ್ದೇಶಿಸಿದೆಯೇ ?

೩) ಹಾಗಿದ್ದಲ್ಲಿ, ಟ್ರಾಫಿಕ್ ಪೋಲೀಸರ ಸಂಖ್ಯೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು). —

ಅ) ಈಗಿರುವ ಪೋಲೀಸ್ ಸಿಬ್ಬಂದಿಯಿಂದ ಈ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ.

ಆ) ಇಲ್ಲ.

ಇ) ಇತ್ತೀಚೆಗೆ ಸಂಚಾರಿ ಪೋಲೀಸ್ ಸಿಬ್ಬಂದಿಗೆ ಒಂದು ನೂರು ಜನರನ್ನು ಸೇರಿಸಲಾಗಿದೆ.